# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 796(957) |
| ಉತ್ತರಿಸಬೇಕಾದ ದಿನಾಂಕ | : | 13.12.2023 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ವಿಧವಾ/ವೃದ್ಧಾಪ್ಯ/ಅಂಗವಿಕಲರ ವೇತನಗಳಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು; ಅವುಗಳಲ್ಲಿ ಮಂಜೂರಾಗಿರುವ ಅರ್ಜಿಗಳೆಷ್ಟು; ತಿರಸ್ಕೃತವಾದ ಅರ್ಜಿಗಳೆಷ್ಟು; ತಿರಸ್ಕೃತವಾಗಲು ಕಾರಣಗಳೇನು; (ಜಿಲ್ಲಾವಾರು ಪ್ರತ್ಯೇಕ ಮಾಹಿತಿ ನೀಡುವುದು)</td><td>ಕಳೆದ ವರ್ಷಗಳಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ವಿಧವಾ/ವೃದ್ಧಾಪ್ಯ/ಅಂಗವಿಕಲರ ವೇತನಗಳಿಗಾಗಿ ಸಲ್ಲಿಕೆಯಾಗಿರುವ /ಮಂಜೂರಾತಿ/ ತಿರಸ್ಕೃತ ಅರ್ಜಿಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ</th><th>ಜಿಲ್ಲೆ</th><th>ಯೋಜನೆ</th><th>ಸ್ವೀಕೃತಿ</th><th>ಮಂ ಜೂರಾ ತಿ</th><th>ತಿರಸ್ಕೃತ</th></tr>
<tr><td>1</td><td rowspan="4">ಬಳ್ಳಾರಿ</td><td>ವಿಧವಾ</td><td>12499</td><td>9695</td><td>3047</td></tr>
<tr><td>2</td><td>ವೃದ್ಧಾಪ್ಯ</td><td>22314</td><td>13198</td><td>9534</td></tr>
<tr><td>3</td><td>ಅಂಗವಿಕಲ</td><td>5041</td><td>3731</td><td>1442</td></tr>
<tr><td>4</td><td>ಸಂಧ್ಯಾಸುರಕ್ಷಾ</td><td>10720</td><td>6122</td><td>4813</td></tr>
<tr><td colspan="3">ಒಟ್ಟು</td><td>50574</td><td>32746</td><td>18836</td></tr>
<tr><td>1</td><td rowspan="4">ವಿಜಯ ನಗರ</td><td>ವಿಧವಾ</td><td>11402</td><td>6473</td><td>1206</td></tr>
<tr><td>2</td><td>ವೃದ್ಧಾಪ್ಯ</td><td>20400</td><td>11674</td><td>5498</td></tr>
<tr><td>3</td><td>ಅಂಗವಿಕಲ</td><td>6497</td><td>3319</td><td>867</td></tr>
<tr><td>4</td><td>ಸಂಧ್ಯಾಸುರಕ್ಷಾ</td><td>16678</td><td>7659</td><td>3585</td></tr>
<tr><td colspan="3">ಒಟ್ಟು</td><td>54977</td><td>29125</td><td>11156</td></tr>
</table>
ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಸೌಲಭ್ಯ ಪಡೆಯಲು ನಿಗಧಿಪಡಿಸಿರುವ ಅರ್ಹತಾಮಾನ ದಂಡಗಳನ್ವಯ ಅರ್ಹರಲ್ಲದ ಹಾಗೂ ನಿಗಧಿತ ದಾಖಲೆಗಳನ್ನು ಸಲ್ಲಿಸದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ.</td></tr>
<tr><td>ಆ)</td><td>ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಮಧ್ಯವರ್ತಿಗಳನ್ನು ಪೋಷಿಸುವ ಕಾರಣಕ್ಕಾಗಿ ಜಿಲ್ಲೆಗಳಲ್ಲಿ ನೇರವಾಗಿ ಬಂದ ಈ ವಿಧವಾ/ವೃದ್ಧಾಪ್ಯ/ಅಂಗವಿಕಲರವೇತನಗಳ ಅರ್ಜಿಗಳನ್ನು ಸಕಾರಣವಿಲ್ಲದೆ ಕೆಳಹಂತದ ಅಧಿಕಾರಿಗಳು ತಿರಸ್ಕರಿಸುತ್ತಿದ್ದು, ಸಕಾರಣವಿಲ್ಲದೇ ಅರ್ಜಿಗಳನ್ನು ತಿರಸ್ಕರಿಸುವ ಸಿಬ್ಬಂದಿಗಳ ವಿರುದ್ಧ ತೆಗೆದುಕೊಂಡಿರುವ / ತೆಗೆದುಕೊಳ್ಳುವ ಶಿಸ್ತು ಕ್ರಮಗಳೇನು; (ಮಾಹಿತಿ ನೀಡುವುದು)</td><td>ಸರ್ಕಾರದ ಸುತ್ತೋಲೆ ಹಾಗೂ ನಿಯಮಾವಳಿ ಪ್ರಕಾರ ಪಿಂಚಣಿ ಅರ್ಜಿಗಳನ್ನು ವಿಲೇವಾರಿ ಮಾಡಲಾಗುತ್ತಿದೆ ಸಕಾರಣವಿಲ್ಲದೆ ಯಾವುದೇ ಅರ್ಜಿಗಳನ್ನು ವಿಲೇವಾರಿ ಮಾಡಿರುವುದಿಲ್ಲ.</td></tr>
<tr><td>ಇ)</td><td>ಈ ವಿಧವಾ/ವೃದ್ಧಾಪ್ಯ/ಅಂಗವಿಕಲರ ವೇತನಗಳಿಗಾಗಿ ಸಲ್ಲಿಕೆ ಯಾಗುವ ಅರ್ಜಿಗಳ ಬಗ್ಗೆ ಜಿಲ್ಲೆ ಅಥವಾ</td><td>ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಪಿಂಚಣಿ ಯೋಜನೆಗಳಡಿ ಸಲ್ಲಿಕೆಯಾಗುತ್ತಿರುವ</td></tr>
</table>

| | | |
|---|---|---|
| | ತಾಲ್ಲೂಕು ಮಟ್ಟದಲ್ಲಿ ವಿಶ್ಲೇಷಣೆ (ರಿವ್ಯೂ ಸಭೆಗಳನ್ನು ನಡೆಸಲಾಗುತ್ತಿದೆಯೇ; ಇದ್ದಲ್ಲಿ ಯಾವಯಾವಾಗ: ಇಲ್ಲವಾದಲ್ಲಿ ಕಾಲಕಾಲಕ್ಕೆ ಈ ರಿವ್ಯೂ ಸಭೆಗಳನ್ನು ಮಾಡಲು ಜಿಲ್ಲಾಡಳಿತಗಳ ಕ್ರಮಗಳೇನು? (ಮಾಹಿತಿನೀಡುವುದು)) | ಅರ್ಜಿಗಳ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು ಪ್ರತಿ ತಿಂಗಳು ಕಂದಾಯ ಗ್ರಾಮ ಆಡಳಿತಾಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಸಭೆ ನಡೆಸಿ ಪ್ರಗತಿಯ ವಿಶ್ಲೇಷಣೆ ಮಾಡಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಕಂದಾಯ ಅಧಿಕಾರಿಗಳ ಸಭೆಯಲ್ಲಿಯೂ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಗತಿ ಪರಿಶೀಲನೆಯನ್ನು ಮಾಡಲಾಗುತ್ತಿದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 75 ಡಿಎಸ್‌ಪಿ 2016, ದಿನಾಂಕ:28/07/2018ರನ್ವಯ ಉಪವಿಭಾಗಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಹೋಬಳಿಯಲ್ಲಿರುವ ಜನಸ್ನೇಹಿ ಕೇಂದ್ರಗಳಲ್ಲಿ ಪ್ರತಿ ತಿಂಗಳು ಪ್ರತಿ ತಾಲ್ಲೂಕಿಗೆ ಒಂದು ಹೋಬಳಿಯಲ್ಲಿ ತಪ್ಪದೇ ಪಿಂಚಣಿ ಅದಾಲತ್‌ನ್ನು ಹಾಗೂ ಗ್ರಾಮಪಂಚಾಯಿತಿ ಮಟ್ಟದಲ್ಲಿ 3 ತಿಂಗಳಿಗೊಮ್ಮೆ "ಪಿಂಚಣಿದಿವಸ" ಕಾರ್ಯಕ್ರಮದಲ್ಲಿ ಕುಂದು ಕೊರತೆಗಳನ್ನು ಆಲಿಸಿ ಪರಿಹರಿಸಲು ಕ್ರಮವಹಿಸಲಾಗುತ್ತಿದೆ. |

**ಕಡತ ಸಂಖ್ಯೆ:ಆರ್‌ಡಿ 40 ಕೆಎಟಿ ಎಸ್‌ಎಸ್‌ಪಿ 2023**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**